ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿ ಜಮೀನು ವಶಪಡಿಸಿಕೊಳ್ಳುವ ಬಗ್ಗೆ

೬೫. ಶ್ರೀ ಎ. ಕೃಷ್ಣಪ್ಪ (ಎಂ.ಎಲ್.ಎ.).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಖಾಸಗಿಯವರಿಂದ ಜಮೀನು ವಶಪಡಿಸಿಕೊಳ್ಳುವಾಗ ಒಂದು ಎಕರೆ ಜಮೀನಿನಲ್ಲಿ ಒಂದು ನಿವೇಶನವನ್ನು ಭೂ ಮಾಲೀಕರಿಗೆ ಕೊಡುವ ಯೋಜನೆ ಏನಾದರೂ ಸರ್ಕಾರದಪರದೆಲ್ಲಿಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಯ ವ್ಯಾಪ್ತಿಯಲ್ಲಿ ನಿವೇಶನಗಳನ್ನು ಪಡೆದವರ ಸಂಖ್ಯೆ ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ೧೧೦ ಮಂದಿ ಭೂ ಮಾಲೀಕರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಿಂದುಳಿದ ವರ್ಗಗಳಿಗೆ ನಿವೇಶನ.

೬೬. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹಿಂದುಳಿದ ವರ್ಗ (ಗ್ರೂಪ್–ಎ) ದವರಿಗೆ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ನಿವೇಶನಗಳ ಒಟ್ಟು ಸಂಖ್ಯೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೩೧೪ ನಿವೇಶನಗಳು.

ಸರ್ಕಾರಿ ಜಮೀನಿನಲ್ಲಿ ಖಾಸಗಿಯವರಿಂದ ಅತಿಕ್ರಮ

೭೭. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಕೃಷ್ಣರಾಜಪುರಂ ಹೋಬಳಿ ಸರ್ವೆ ನಂ. ೭೮ ಜಮೀನನ್ನು ಸರ್ಕಾರದ ಸ್ವತ್ತಾಗಿದ್ದು ಖಾಸಗಿಯವರು ಈ ಆಸ್ತಿಯ ಮೇಲೆ ಅತಿಕ್ರಮಣ ಮಾಡಲು ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಪ್ರಸ್ತಾಪಿತ ಭೂವಿವಾದ ಹಿಡುವಳಿ ಜಮೀನಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

ಆ) ಉದ್ಭವಿಸುವುದಿಲ್ಲ.

ಪೋಲೀಸ್ ಅಧಿಕಾರಿಗಳು ಸಾವನ್ನಪ್ಪಿದ ಬಗ್ಗೆ

೭೮. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ಕುಖ್ಯಾತ ಗಂಧದ ಕಳ್ಳಸಾಗಾಣಿಕೆದಾರ ವೀರಪ್ಪನನ್ನು ಬಂಧಿಸಲು ಹೋದ ಸಂದರ್ಭದಲ್ಲಿ ಸಾವನ್ನಪ್ಪಿದ ಪೋಲೀಸ್ ಅಧಿಕಾರಿಗಳ ಕುಟುಂಬ ವರ್ಗದವರಿಗೆ ಸರ್ಕಾರದವರು ಪರಿಹಾರ ಕೊಟ್ಟಿರುವರೆ ?

ಆ) ಕೊಟ್ಟಿದ್ದರೆ ವಿವರಗಳನ್ನು ಒದಗಿಸುವುದು ?

ಇ) ಈ ಕುಟುಂಬ ವರ್ಗದ ಸದಸ್ಯರಿಂದ ಸರ್ಕಾರಕ್ಕೆ ನೌಕರಿ ಕೊಡಿ ಎಂದು ಅರ್ಜಿ ಸಲ್ಲಿಸಿರುವರೆ?

ಈ) ಹಾಗಿದ್ದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ)

	ಪಂರಣ ಹೊಂದಿದ ವ್ಯಕ್ತಿಯ ಹೆಸರು	ವಂಜೂರು ಮಾಡಿದ ಪರಿಹಾರದ ಹಣ (ರೂ. ಲಕ್ಷಗಳಲ್ಲಿ)
೧	ದಿನೇಶ್, ಪಿ.ಎಸ್.ಐ.	೧.೦೦
೨	ಜಗನ್ನಾಥ್, ಪಿ.ಎಸ್.ಐ.	೧.೦೦
೩	ರಾಮಲಿಂಗೂ, ಪಿ.ಎಸ್.ಐ.	೧-೦೦
೪	ಶಂಕರ್ ರಾವ್, ಎ.ಪಿ.ಸಿ.	೧.೦೦

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿಗೆ ಸೇರಿದ ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ

೧೬೧. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಅವರಲ್ಲಿ ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನಾಗಿ ನೇಮಿಸಿದವರ ಸಂಖ್ಯೆ ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ೧೩.

ಆ) ಇಲ್ಲ.

ಹತ್ತಿ ಬೆಲೆ ಕುಸಿದಿರುವ ಬಗ್ಗೆ

೧೬೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹತ್ತಿ ಬೆಲೆ ಕುಸಿದಿದ್ದರಿಂದ ರೈತರು ತುಂಬಾ ತೊಂದರೆಗೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಹತ್ತಿಗೆ ನಿಗದಿತ ಬೆಲೆ ಕೊಡಿಸುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಡಾ. ಹೆಚ್, ಆರ್. ರಾಜು (ಸಹಕಾರ ಮಂತ್ರಿಗಳು).—

ಅ) ಇಲ್ಲ. ಕೇಂದ್ರ ಸರ್ಕಾರದವರು ೧೯೮೯–೯೦ನೇ ಸಾಲಿಗೆ ನಿಗದಿಗೊಳಿಸಿರುವ ಬೆಂಬಲ ಬೆಲೆಗಿಂತಲೂ ರಾಜ್ಯದಲ್ಲಿ ಹತ್ತಿಯ ಮಾರುಕಟ್ಟೆ ದರಗಳು ಜಾಸ್ತಿ ಇರುತ್ತದೆ.

ಆ) ಮೇಲಿನ ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.